ಗೋಪಾಲಕೃಷ್ಣ ಪೈ

# ಬಾಂಬ್ ಸ್ಫೋಟ ಹಿನ್ನೆಲೆಯ ಪ್ರೇಮಕತೆ



ಕಮ್ಯೂನಿಸ್ಟ್ ರಷ್ಯಾದಲ್ಲಿ ಈಸೆನ್ ಸ್ಟೈನ್, ಪುಡೋವ್ ಕಿನ್, ಟಾರ್ಕೊವಸ್ಕಿ ಮುಂತಾದ ಚಲನಚಿತ್ರ ನಿರ್ದೇಶಕರು ತಮ್ಮ ಸಿನಿಮಾಗಳ ಮೂಲಕ ಹೊಸ ಭಾಷ್ಯಗಳನ್ನು, ಹೊಸ ಸಿದ್ಧಾಂತಗಳನ್ನು ರಚಿಸಿ ಜಗತ್ತಿನಾದ್ಯಂತ ಸಿನಿಮಾ ನಿರ್ದೇಶಕರ ಗಮನ ಸೆಳೆದರು. ಸಿನಿಮಾ ಕಟ್ಟುವ ರೀತಿ, ಚಿತ್ರಿಕೆಗಳ ಜೋಡಣೆ, ನೆಳಲು ಬೆಳಕುಗಳ ಬಳಕೆ, ವಸ್ತುವಿಷಯದ ಅಳವಡಿಕೆ, ಅದರ ಕಲೆಗಾರಿಕೆ, ನಿರ್ಮಾಣದ ಆಂತರಿಕ ಒತ್ತಡ ಮತ್ತು ಅಭಿವ್ಯಕ್ತಿಯ ಅಗತ್ಯ ಇವುಗಳನ್ನು ಪ್ರಸ್ತುತ ಪಡಿಸುತ್ತಾ ಹೋದ ಅವರು 'ಸಿನಿಮಾ' ಎಂಬ ಒಂದು ಕಸುಬಿನ ವೈಖರಿಯನ್ನೇ ಬದಲಾಯಿಸಿಬಿಟ್ಟರು. ಹಲವು ದೇಶಗಳ ಪ್ರತಿಭಾವಂತ ಚಲನಚಿತ್ರ ನಿರ್ದೇಶಕರು ಅವರ ಪ್ರಭಾವಕ್ಕೆ ಒಳಗಾಗಿ ತಾವು ಸಿನಿಮಾ ಮಾಡುವಾಗ ಆ ಸಿದ್ಧಾಂತಗಳನ್ನು ಬಳಸಿ ಶ್ರೇಷ್ಠ ಚಿತ್ರಗಳನ್ನು ನಿರ್ಮಿಸಿ ಸಫಲರಾದರು. ಅದೇ ರೀತಿ ಕಾಲಕಾಲಕ್ಕೆ ರಷ್ಯಾದ ಒಳಗೂ ಅನೇಕ ನಿರ್ದೇಶಕರು ತಮ್ಮದೇ ಶೈಲಿಯ ಚಿತ್ರಗಳನ್ನು ನಿರ್ಮಿಸಿ ಪ್ರಸಿದ್ಧರಾದರು. ಅಂಥವರಲ್ಲಿ ಮುಖ್ಯವಾಗಿ ಕಾಣುವವನು ಅಲೆಕ್ಸಾಂಡರ್ ಕೋಟ್.

1973ರಲ್ಲಿ ಹುಟ್ಟಿದ ಕೋಟ್ ಇಲ್ಲಿಯವರೆಗೆ, ಅಂದರೆ ತನ್ನ 25ನೆಯ ವಯಸ್ಸಿನಲ್ಲಿ